

## ಯಾರದು ಇಣುಕುತ್ತಿರುವುದು?

ಪ್ರಕೃತಿಯ ಮಡಿಲಲ್ಲಿ ಹತ್ತು ಹಲವು ವೈಚಿತ್ರ್ಯಗಳು ಕಣ್ಣಿಗೆ ಬೀಳುತ್ತವೆ. ಕೆಲವೊಂದು ವಿಷಯಗಳು ಬರಿ ಕಣ್ಣಿಗೆ ಕಾಣುವುದಕ್ಕಿಂತಲೂ ವಿಶೇಷವಾಗಿ ಕ್ಯಾಮೆರಾ ಕಣ್ಣಿಗೆ ಗೋಚರಿಸುತ್ತವೆ. ಹಾಗೆ ಕ್ಯಾಮೆರಾ ಕಣ್ಣು ಸೆರೆ ಹಿಡಿದ ಒಂದು ಛಾಯಾಚಿತ್ರ ನಿಮ್ಮ ಮುಂದಿದೆ.

ಮರದ ಮೇಲಿನ ತನ್ನ ಮನೆಯಿಂದ ಸುತ್ತಲಿನ ಪರಿಸರದ ವೀಕ್ಷಣೆಯಲ್ಲಿ ತೊಡಗಿರುವ ಉಡ (monitor Lizard). ಇದರ ಉದ್ದ ಸುಮಾರು 1.75 ಮೀಟರ್. ಇದರ ಬಾಲವೇ 1 ಮೀಟರ್‌ನಷ್ಟು ದೊಡ್ಡದಾಗಿದೆ. ಉಡವನ್ನು ಕ್ಯಾಮೆರಾ ಕಣ್ಣಲ್ಲಿ ಸೆರೆ ಹಿಡಿದವರು ಪಿ.ಜಿ. ಕೃಷ್ಣಮೂರ್ತಿಯವರು.

—ಅಶ್ವಿನಿಮೂರ್ತಿ ಅಯ್ಯನಕಟ್ಟೆ,
ಸುಳ್ಯ



## ಪ್ರಕೃತಿಯ ಅದ್ವಿತೀಯ ಸುಮಗಳು

ನಗರಗಳಿಗಿಂತ ಹಳ್ಳಿಗಳೇ ಚೆಂದ. ಅದರಲ್ಲೂ ಮಳೆಗಾಲ ಶುರುವಾದರಂತೂ ಕೇಳುವುದೇ ಬೇಡ. ಗ್ರಾಮಾಂತರ ಪ್ರದೇಶದಲ್ಲಿ ಎಲ್ಲೆಲ್ಲೂ ಹಸಿರು ನಿತ್ಯೋತ್ಸವ. ಕಣ್ಣನ್ನು ಹಾಯಿಸಿದರೆ ಕಾಣುವುದು ಅರಳಿ ನಿಂತು ಘಮಘಮಿಸುವ ಸುಮಗಳು. ಹಚ್ಚಹಸುರಿನ ವಾತಾವರಣ.

ಈ ಚಿತ್ರದಲ್ಲಿ ಕಾಣುತ್ತಿರುವ ಹೂವನ್ನು ಕಾಡು ಅರಿಶಿನದ ಹೂವೆಂದು ಕರೆಯುತ್ತಾರೆ. ಇದರ ಎಲೆಗಳು ನಾವು ಉಪಯೋಗಿಸುವ ಅರಿಶಿನ ಗಿಡದ ಎಲೆಯ ಹಾಗೆಯೇ ಇರುತ್ತವೆ. ಆದರೆ ಬಳಸಲು ಯೋಗ್ಯವಲ್ಲ. ಉಪಯೋಗವಿಲ್ಲದಿದ್ದರೂ ಹೂವಿನ ಸೌಂದರ್ಯ, ಆಕರ್ಷಕ ಬಣ್ಣ, ವಿನ್ಯಾಸಗಳು ಕಣ್ಮನಗಳಿಗೆ ತಂಪೆರೆಯುವುದರಲ್ಲಿ ಎರಡು ಮಾತಿಲ್ಲ. ಹೂವನ್ನು ದೂರದಿಂದ ನೋಡಿದರೆ ಯಾರೋ ವಿದ್ಯುತ್ ದೀಪಾಲಂಕಾರ ಮಾಡಿದ್ದಾರೇನೋ ಎಂದೆನಿಸುತ್ತದೆ. ನಿಜಕ್ಕೂ ಪ್ರಕೃತಿಯ ಸೃಷ್ಟಿ ಅದ್ವಿತೀಯ.

—ಪುಷ್ಪ ಎನ್.ಕೆ. ರಾವ್, ಉಡುಪಿ

## ಬದುಕು ಬಣ್ಣದ ಬಂಡಿ

ನೀರು ಜೀವಕ್ಕೆ ಆಸರೆ. ಇಲ್ಲೊಬ್ಬರಿಗೆ ನೀರು ತುಂಬಿಸುವ ಬಿಂದಿಗೆಯೇ ಬದುಕಿನ ಆಸರೆ. ನಿತ್ಯ ಗಾಡಿ ತುಂಬಾ ಸಮತೋಲನ ಮಾಡಿ ಏರಿಸಿದ ಬಣ್ಣ ಬಣ್ಣದ ಬಿಂದಿಗೆಗಳನ್ನು ಮಾರಾಟ ಮತ್ತು ಸಾಗಾಟ ಮಾಡಿ ಜೀವನ ಸಾಗಿಸುವುದೇ ಇವರ ಕಾಯಕ. ಈ ದೃಶ್ಯ ಬಾಗಲಕೋಟೆಯಿಂದ ಲೋಕಾಪುರ ದಾರಿಯಲ್ಲಿ ಕಂಡುಬಂತು.

—ಜಾನಕಿ ಎಸ್., ಬಾಗಲಕೋಟೆ



### ನೀವೂ ಬರೆಯಿರಿ

'ಸುಧಾ' ವಾರ ಪತ್ರಿಕೆಯಲ್ಲಿ ಪ್ರಕಟವಾಗುವ ನಿಮ್ಮಪುಟ ಓದುಗರ ಅಂಕಣ. ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

ವಿಳಾಸ: editorsu@sudha.co.in

@SudhaWeekly